# NEW HORIZON PRE UNIVERSITY COLLEGE

II PUC MODEL QUESTION PAPER - 01

**ವಿಷಯ : ಕನ್ನಡ (01)**

**ಒಟ್ಟು ಅಂಕಗಳು : 100**

ಅ–ವಿಭಾಗ

I . ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ. ( 10 X 1 = 10)

1. ಯಾರ ಕೈಯಲ್ಲಿ ದರ್ಪಣವಿದ್ದು ಫಲವಿಲ್ಲ ?
2. ಅಣ್ಣನಾಜ್ಞೆಯಲಿ ಭ್ರಮಿತನಾದವನು ಯಾರು ?
3. ಹೆಣ್ಣುಮಕ್ಕಳ ದುಃಖವನ್ನು ಬಲ್ಲವರು ಯಾರು ?
4. ಬೇಟೆಗಾರ ಯಾರು ?
5. ಅದೃಷ್ಟದ ಆಯ್ಕೆ ಬಂದಾಗ ಲೇಖಕಿಗೆ ಯಾರು ಜ್ಞಾಪಕಕ್ಕೆ ಬರುತ್ತಾರೆ ?
6. ಕನ್ನಡದ ಮೂಲಕ ಕಲಿತು ಶ್ರೇಷ್ಠ ವಿಜ್ಞಾನಿಯಾದವರು ಯಾರು ?
7. ಅಬ್ದುಲ್ ಕಲಾಂ ಅವರ ಆತ್ಮಚರಿತ್ರೆಯ ಹೆಸರೇನು ?
8. ಆನೆಯ ಮಾವುತನ ಹೆಸರೇನು ?
9. ಟೆಲಿಫೋನ್ ಕಂಬದ ಮೇಲೆ ಮೃತನಾದ ಲೈನ್ ಮನ್ ಯಾರು ?
10. ಪೋಲಿಸರು ಏನೆಂದು ಮಹಜರು ಬರೆದುಕೊಂಡರು ?

ಆ-ವಿಭಾಗ

II ಅ) ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯದಲ್ಲಿ ಉತ್ತರಿಸಿ. (4 X 2 = 8)

11. ರಾವಣನು ಅಂತಿಮವಾಗಿ ಯಾವ ನಿರ್ಧಾರಕ್ಕೆ ಬರುತ್ತಾನೆ ?
12. ಕೊಲಲಕ್ಷಮರೆಂದು ದ್ರೌಪದಿ ಯಾರನ್ನು ಕುರಿತು ಹೇಳಿದ್ದಾಳೆ ?
13. ಯಾರಿಂದ ಯಾವುದನ್ನು ಹೇಗೆ ಕಲಿಯ ಬೇಕೆಂದು ಸೋಮನಾಥನು ಹೇಳಿದ್ದಾನೆ ?
14. ಹಿತ್ತಾಳೆಗಿಂತ ಬಲುಹೀನ ಯಾವುದು ?
15. ಶಿಲುಬೆಗೇರಿಸಿದವರ ಗುಣಗಳು ಇಂದು ಯಾವ ನಿರ್ಧಾರಕ್ಕೆ ಬರುತ್ತಾನೆ ?

ಆ) ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯದಲ್ಲಿ ಉತ್ತರಿಸಿ. (3 X 2 = 6)

16. ಬ್ರಿಟಿಷರು ಬರುವ ಮೊದಲು ವಾಲ್ ಪರ್ಸೈ ಹೇಗಿತ್ತು ?
17. ಸೀತಾಳ ಓದುವ ಆಸಕ್ತಿ ಹೇಗಿತ್ತು ?
18. ತ್ರಿಭಾಷಾ ಸೂತ್ರದ ಬಳಕೆ ಹೇಗಿರಬೇಕು ?
19. ಕುದುಪನಿಗೆ ಹನಿಗಣ್ಣಾಗಲು ಕಾರಣವೇನು ?

ಇ) ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯದಲ್ಲಿ ಉತ್ತರಿಸಿ. (3 X 2 = 6)

20. ಆನೆ ಸಾಕುವುದರ ಬಗ್ಗೆ ಜನರ ನಂಬಿಕೆ ಏನಾಗಿತ್ತು ?
21. ಹುಚ್ಚು ನಾಯಿಗಳು ಆಸ್ಪತ್ರೆಯಲ್ಲಿ ಹೇಗೆ ವರ್ತಿಸುತ್ತವೆಂದು ಪುಟ್ಟಯ್ಯ ಹೇಳಿದನು ?
22. ಆನೆಯನ್ನು ಹದುಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದ ?
23. ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು ?

ಇ-ವಿಭಾಗ

III ಅ) ಕೆಳಗಿನ ಎಲ್ಲಾ ವಾಕ್ಯಗಳನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ (2 X 3 =6)

24. ರಘುತನುಜುನಾಯಃ ಪ್ರಾಣಂ ಬರೆಗಂ ಬಾರದಿರು .
25. ಮೂಲಾಗ್ರ ಪರಿಯಂತ ಮುಳು ಕೂಡಿಪ್ರಂತ.
26. ಮುಳುಗಿರಲಿ ಮುಪ್ಪುಚಿಂತನದಿ.

**III** ಆ) ಕೆಳಗಿನ ಎಲ್ಲಾ ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯಗಳನ್ನು ಬರೆಯಿರಿ. (1 X 3 =3)

27. " ಈ ಪ್ರದೇಶಕ್ಕೆ ಆಗ ಹೆಸರೇ ಇರಲಿಲ್ಲ"

28."ವಿಜ್ಞಾನದ ಅಡಿಪಾಯವೇ ಪ್ರಶ್ನೆ ಕೇಳುವುದು ".

ಇ) ಕೆಳಗಿನ ಎಲ್ಲಾ ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ. (1 X 3 = 3)

29. "ನಂಗೇನು ಈ ನಾಯಿಗಳನ್ನು ಕಂಡರೆ ಪ್ರೀತಿನಾ ಸ್ವಾಮಿ"

30. ಇತ್ತ ಮುಖ ಹಾಕಲಿ ಅದನ್ನು ಕೋವಿಲೆ ಹೊಡಿತೀನಿ.

ಈ-ವಿಭಾಗ

**IV** ಅ) ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಐದು-ಆರು ವಾಕ್ಯದಲ್ಲಿ ಉತ್ತರಿಸಿ. (3 X 4=12)

31. ರಾವಣನಲ್ಲಿ ಕಂಡು ಬರುವ ಪಶ್ಚಾತ್ತಾಪವನ್ನು ಕವಿ ಹೇಗೆ ನಿರೂಪಿಸಿದ್ದಾರೆ ?

32. ಭೀಮನು ದ್ರೌಪದಿಯನ್ನು ಹೇಗೆ ಸಂತೈಸಿದನು ?

33. ಸಕಾಲಕ್ಕೆ ಒದಗುವ ಸಹಾಯವೇ ಶ್ರೇಷ್ಠ ಎಂಬುದನ್ನು ಕವಿ ಹೇಗೆ ಚಿತ್ರಿಸಿದ್ದಾನೆ ? ವಿವರಿಸಿ

34. ಸಮಾಜ ಕಂಟಕರ ಬಗೆಗೆ ಪುರಂದರದಾಸರ ಅಭಿಪ್ರಾಯಗಳನ್ನು ಸಂಗ್ರಹಿಸಿ ಬರೆಯಿರಿ .

ಆ) ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದು-ಆರು ವಾಕ್ಯದಲ್ಲಿ ಉತ್ತರಿಸಿ. (2 X 4 =8)

35. ಕಣ್ಣು ನೋವು ಶುರುವಾದ ಆರಂಭದಲ್ಲಿ ಬಸಲಿಂಗ ಪಡೆದುಕೊಂಡ ಚಿಕಿತ್ಸೆ ಯಾವ ರೀತಿಯದು ?

36. ಲೇಖಕಿಯ ಪತಿಯ ಮೂತ್ರಪಿಂಡದ ಕಲ್ಲು ಕರಗಿ ಹೋದದ್ದು ಹೇಗೆ ?

37. ಚಿನಮ್ಮ ಬೆಳ್ಳಿಲೋಹವನ್ನು ಮತ್ತೆ ಹೊಳೆಗೆ ಎಸೆಯಲು ಕಾರಣವೇನು ?

ಇ) ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದು-ಆರು ವಾಕ್ಯದಲ್ಲಿ ಉತ್ತರಿಸಿ. (2 X 4 =8)

38. ಅರಣ್ಯ ಇಲಾಖೆಯ ಶತ್ರುಗಳ ಕಾರ್ಯಭಾರವನ್ನು ನಾಗರಾಜ ವಿವರಿಸಿದ್ದು ಹೇಗೆ ?

39. ತನ್ನ ಆನೆಯ ಬಗೆಗೆ ಕೃಷ್ಣೆಗೌಡರಲ್ಲಿ ಬೇಸರ ಮೂಡಲು ಕಾರಣಗಳೇನು ?

40. ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣನ ಸಾವಿಗೆ ಕೃಷ್ಣೇಗೌಡರ ಆನೆ ಕಾರಣವ ಚರ್ಚಿಸಿ ?

ಉ-ವಿಭಾಗ

ಅ) ಕೆಳಗಿನ ಎಲ್ಲಾ ಪದ್ಯದ ಭಾವಾರ್ಥವನ್ನು ಬರೆಯಿರಿ . (1 X 5 = 5)

41. ಕರುಣೆಸುವೊಡೆನಗೆ ದಶಕಂ
ಧರ ಧುರದೊಳ್ ರಘುತನೂಜನಾಯಃಪ್ರಾಣಂ
ಬರೆಗಂ ಬಾರದಿರೆನುತುಂ
ಧರಿತ್ರಿಯೊಳ್ ಮೈಯನೊಕ್ಕು ಮೂರ್ಚೆಗೆ ಸಂದಳ್

42. ವಿದ್ಯೆ: ಶಾಲೆ ಕಾಲೇಜುಗಳು ಕಲಿಸಿದ್ದು ದಾರಿ ಬದಿ ನೂರಾರು
ಜಾಹಿರತುಗಳು ತಲೆಗೆ ತುರುಕಿದ್ದು
ರೇಡಿಯೋ ಸಿಲೋನ್ ವ್ಯಾಪಾರ ವಿಭಾಗ ಶಿಫಾರಸ್ಸು ಮಾಡಿದ್ದು
ನೀನಾಗಿ ಕಲಿತದ್ದು ಬಲು ಕಡಿಮೆ , ಬಸ್ ಸ್ಟಾಪಿನಲ್ಲಿ ನಿಂತ
ಬಣ್ಣಗಳ ಕಡೆಗೆ ಕಣ್ಣಾಡಿಸುವಿದೊಂದನ್ನು ಹೊರೆತು

ಭಾಷಾಭ್ಯಾಸ

ಅ) ಈ ಕೆಳಗಿನವುಗಳಲ್ಲಿ ಎಲ್ಲಾ ಸೂಚನೆಗನುಗುಣವಾಗಿ ಉತ್ತರಿಸಿ. (2 X 6 = 12)

43. ಈ ಪದಗಳಿಗೆ ಅರ್ಥ ಬರೆಯಿರಿ

1) ಕಲಹ 2) ಪಂಕ]

44. ಈ ಕ್ರಿಯಪದಗಳ ನಿಷೇಧ ರೂಪ ಬರೆಯಿರಿ

1) ಬರೆಯುವನು 2) ಕರೆಯಿತು

45. <u>ಈ ಪದಗಳ ತತ್ಸಮ / ತದ್ಭವ ರೂಪ ಬರೆಯಿರಿ.</u>

1) ಪರಿಕಿಸು    2) ಘೂಕ

46. <u>ಈ ಪದಗಳ ನಾನಾರ್ಥಗಳನ್ನು ಬರೆಯಿರಿ .</u>

1) ನೆರೆ    2) ಕೊನೆ

47. <u>ಈ ಪದಗಳಲ್ಲಿನ ಗುಣವಾಚಕಗಳನ್ನು ಗುರುತಿಸಿ</u>

1) ಘೋರ ಪಾಪಿ    2) ಹುಸಿ ನಿದ್ದೆ

48. <u>ಈ ಪದಗಳ ವಿಭಕ್ತಿ ಪ್ರತ್ಯಯಗಳನ್ನು ಬರೆಯಿರಿ</u>

1) ಧರೆಯೊಳ್    2)ಪಾಪಿಗೆ

49. <u>ಈ ಪದಗಳನ್ನು ಬಳಸಿ ಸ್ವಂತವಾಕ್ಯ ರಚಿಸಿರಿ</u>

1) ಎರಡುಬಗೆ    2) ತಲೆದೂಗು

<u>ಆ) ಎಲ್ಲಾ ಪ್ರಬಂಧವನ್ನು ಬರೆಯಿರಿ</u> (1 x 5 = 5 )

50. ಹೆಚ್ಚುತ್ತಿರುವ ವೃದ್ಧಾಶ್ರಮಗಳು.

51. ಪ್ಲಾಸ್ಟಿಕ್ ಮುಕ್ತ ಭಾರತ.

<u>ಇ) ಪತ್ರಲೇಖನ  ಈ ಕೆಳಗಿನ ಎಲ್ಲಾ ಕುರಿತು ಪತ್ರ ಬರೆಯಿರಿ</u> (1  x 4 =4)

52. ಪರೀಕ್ಷಾ ಸಿದ್ಧತೆಯ ಕುರಿತು ನಿಮ್ಮ ತಂದೆಗೊಂದು ಪತ್ರ ಬರೆಯಿರಿ.

53. ನಿಮ್ಮ ಅಣ್ಣನ ಮದುವೆಗೆ ನಾಲ್ಕು ದಿನ ರಜೆಕೋರಿ ನಿಮ್ಮ ಪ್ರಾಚಾರ್ಯರಿಗೆ ಪತ್ರವನ್ನು ಬರೆಯಿರಿ

<u>ಉ) ಕೆಳಗಿನ ಎಲ್ಲಾ ಗಾದೆಯನ್ನು  ವಿಸ್ತರಿಸಿ ಬರೆಯಿರಿ .</u> (1 x 4 = 4 )

54. ಹಣಕ್ಕಿಂತ ಗುಣ ಮುಖ್ಯ .

55. ಆಕಳು ಕಪ್ಪಾದರೆ ಹಾಲು ಕಪ್ಪೆ ?

******

# NEW HORIZON PRE UNIVERSITY COLLEGE

## II PUC MODEL QUESTION PAPER - 02

**ವಿಷಯ : ಕನ್ನಡ (01)**

**ಒಟ್ಟು ಅಂಕಗಳು : 100**

ಅ–ವಿಭಾಗ

I . ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ . (10 x 1 = 10 )

1. ರಾವಣನ ಎದುರು ಪ್ರತ್ಯಕ್ಷವಾದ ವಿದ್ಯಾ ದೇವತೆ ಯಾರು ?
2. ರಾಜಸಭೆಯೊಳಗೆ ದ್ರೌಪದಿಯನ್ನು ಒದೆದವರು ಯಾರು ?
3. ಲಕ್ಷದಾರಿಗಳ ಚದುರಂಗದಾಟ ಯಾವುದು ?
4. ಜೀಸಸ್ ನ ಮುಖಮುದ್ರೆ ಏನನ್ನು ನುಡಿವಂತಿದೆ ?
5. ಬಸಲಿಂಗ ವೈದ್ಯರಿಗಾಗಿ ಅಲೆದಾಗ ಜೊತೆಗಿದ್ದ ರಾಜಕಾರಣಿ ಯಾರು ?
6. ಕೆಂಪು ಪಟ್ಟಿಗೆ ಸೇರಿದ ಪ್ರಾಣಿ ಯಾವುದು
7. ನಮ್ಮ ದೇಶದಲ್ಲಿ ಖಿಲವಾಗಿ ಹೋದ ಧರ್ಮ ಯಾವುದು ?
8. ಆನೆಯ ಮಾವುತನ ಹೆಸರೇನು ?
9. ನಿರೂಪಕರ ಇಕಾಲಜಿಸ್ಟ್ ಗೆಳೆಯ ಯಾರು ?
10. ನಾಗರಾಜ ಕೋವಿ ಹಿಡಿದು ಎಲ್ಲಿ ಕುಳಿತಿದ್ದ ?

ಆ -ವಿಭಾಗ

II . ಅ) ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (4 x 2 = 8 )

11. ರಾವಣನು ಸೊಕ್ಕಿನಿಂದ ಸೀತೆಯನ್ನುದ್ದೇಶಿ ಆಡಿದ ಮಾತುಗಳಾವುವು ?
12. ಉರಿಲಿಂಗಪೆದ್ದಿಯ ಪ್ರಕಾರ ಗುರುವಿನ ಲಕ್ಷಣಗಳೇನು ?
13. ಜಾಲಿಯ ಮರದ ನಿರರ್ಥಕತೆಯನ್ನು ಪುರಂದರದಾಸರು ಹೇಗೆ ತಿಳಿಸಿದ್ದಾರೆ ?
14. ಮುಂಬೈ ಜಾತಕ ಕವಿತೆಯಲ್ಲಿ ಚಿತ್ರಿಸಿರುವಂತೆ ಮಗು ಹುಟ್ಟಿ ಬೆಳೆದುದು ಎಲ್ಲಿ ?
15. ಕಿಸ್ಮಸ್ ಮನೆಗೆ ಏನನ್ನು ಹೊತ್ತು ತಂದಿದೆ ?

ಆ) ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ (3 x 2 = 6)

16. ಸಿದ್ಲಿಂಗಿ ಏಕೆ ರಾದ್ಧಾಂತ ಮಾಡಿದಳು ?
17. ಮಾರ್ಷ್ ನನ್ನು ಕಂಡು ಆದಿವಾಸಿಗಳು ಹೇಗೆ ಪ್ರತಿಕ್ರಿಯಿಸಿದರು ?
18. ಕಮಲ ಮೇಡಂ ವೈದ್ಯರ ಯಾವ ಸಲಹೆಗಳನ್ನು ರೂಢಿಸಿಕೊಂಡರು ?
19. ಕಲಾಂ ಅವರ ಬದುಕಿನ ಮಂತ್ರ ಯವುದು ?

ಇ) ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ . (3 x 2 = 6 )

20. ಫಾರೆಸ್ಟ್ ಡಿಪಾರ್ಟ್ ಮೆಂಟಿನವರ ನಂಬರ್ ಒನ್ ಎನಿಮಿಗಳು ಯಾರು ಯಾರು ?
21. ಸೊರಗಿದ್ದ ಆನೆಯನ್ನು ಕೃಷ್ಣೇಗೌಡ ಹೇಗೆ ಸಾಕಿದ ?
22. ಕಾಡಪ್ಪ ಶೆಟ್ಟರು ಯಾವ ವರ್ತಮಾನವನ್ನು ಮುಟ್ಟಿಸಿದರು ?
23. ಡ್ರೈವರ್ ಅಬ್ಬಾಸ್ ಕ್ಲೀನರ್ ಕೃಷ್ಣರ ಸಾವಿಗೆ ಕಾರಣವೇನು ?

ಇ-ವಿಭಾಗ

III ಅ) ಎಲ್ಲಾ ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ವಿವರಿಸಿ . (2 x 3= 6 )

24. ಕಲಿಭೀಮನೇ ಮಿಡುಕುಳ್ಳ ಗಂಡನು
25. ಆಪತ್ತಿನೊಳ್ ಮಣಿದು ನೋಡದ ಬಂಧು ವೇತಕೆ
26. ಬಲೆ ಬೀಸಿ ಬಂದ , ಆಗೋ ಬೆಳಕು ಬೇಟೆಗಾರ.

ಆ) ಎಲ್ಲಾ ವಾಕ್ಯ ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ವಿವರಿಸಿ (1 x 3 = 3 )

27. ಹಾಡುವುದು ಅವುಗಳಿಗೆ ಅನಿವಾರ್ಯ ; ಅವುಗಳ ಕರ್ಮ

28. ಕನ್ನಡಿಗರು ಮೊದಲು ಕನ್ನಡದವರಾಗಬೇಕು

ಇ) ಎಲ್ಲಾ ವಾಕ್ಯ ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ವಿವರಿಸಿ (1 x 3 = 3 )

29. ನಮ್ಮ ಕಡೆ ಕೆಮ್ಮು ಕಾಲಿಂಗ್ ಬೆಲ್ ಇದ್ದ ಹಾಗೆ .

30. ಕಂಬದ ಮೇಲೆ ಯಾಕೋ ಕೈಲಾಸ ಕಂಡ ಹಾಗೆ ಇದೆಯಲ್ಲಾ .

ಈ -ವಿಭಾಗ

IV. (ಅ) ಎಲ್ಲಾ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿರಿ. (3 x 4 = 12 )

31. ರಾವಣನು ಬಹುರೂಪಿಣೀ ವಿದ್ಯೆಯನ್ನು ಒಲಿಸಿಕೊಂಡ ಸಂದರ್ಭವನ್ನು ವಿವರವಾಗಿ ಬರೆಯಿರಿ.

32. ವೀರ, ಮಂತ್ರಿ, ರಾಜ ಮತ್ತು ಯೋಗಿಗಳಿಗೆ ಇರಬೇಕಾದ ಅರ್ಹತೆಗಳೇನು ?

33. 'ಬೆಳಗು ಜಾವ ' ಕವನದ ಮೂಲಕ ಕವಿ ಬೇಂದ್ರೆ ಹೇಳಿರುವ ವಿಚಾರಗಳಾವುವು ?

34. ಯಾವ ಸ್ಥಳಗಳಲ್ಲಿ ಜೀಸಸ್ ದಿನನಿತ್ಯ ಶಿಲುಬೆ ಏರಿದ್ದಾನೆ ? ವಿವರಿಸಿ ?

(ಆ) ಎಲ್ಲಾ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿರಿ (**2** x 4 = 8 )

35. ಬಸಲಿಂಗ ಡಾ!! ತಿಮ್ಮಪ್ಪನವರ ಸೂಚನೆಗಳನ್ನು ಪಾಲಿಸದೆ ಇರಲು ಕಾರಣವೇನು ?

36. ಮುಸುರೆ ಪಾತ್ರೆಗಳು ನೀರು ಪಾಲಾದದ್ದು ಹೇಗೆ ? ಅವುಗಳನ್ನು ಮೇಲೆತ್ತಲು ಮಾಡಿದ ಪ್ರಯತ್ನಗಳೇನು ?

37. ರಾಷ್ಟ್ರಪತಿಯಾಗಿ ಆಯ್ಕೆಯಾದಾಗ ಚೆನ್ನೈನ ಪತ್ರಿಕಾಗೋಷ್ಠಿಯಲ್ಲಿ ಕಲಾಂ ಹೇಳಿದ್ದೇನು ? ವಿವರಿಸಿ

(ಇ) ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಐದು-ಆರು ವಾಕ್ಯದಲ್ಲಿ ಉತ್ತರಿಸಿ. (**2** x 4 = 8 )

38. ಆನೆ ಮತ್ತು ಮಾವುತ ವೇಲಾಯುಧನನ್ನು ಸಾಗಹಾಕಲು ಮಠದವರು ಹವಣಿಸಿದ್ದೇಕೆ?

39. ಟೆಲಿಫೋನ್ ಲೈನ್ ಮನ್ ತಿಪ್ಪಣ್ಣನ ಸಾವಿನ ಸಂದರ್ಭವನ್ನು ವಿವರಿಸಿ .

40. ನಾಗರಾಜನ ನಿಗೂಢ ಕಣ್ಮರೆಯ ಬಗ್ಗೆ ಜನರ ಅಭಿಪ್ರಾಯಗಳೇನು ?

**V**. ಅ) ಎಲ್ಲಾ ಪದ್ಯದ ಭಾವಾರ್ಥವನ್ನು ಬರೆಯಿರಿ . (**1** x 5 = 5 )

41. ಹೆಂಡತಿಯ ಹರಿಬದಲಿಯೊಬ್ಬನೆ
ಗಂಡುಗೂಸೆ ವೈರಿಯನು ಕಡಿ
ಖಂಡವನು ಮಾಡುವನು ಮೇಣ್ ತನ್ನೊಡಲನಿಕ್ಕುವನು
ಗಂಡರೈವರು ಮೂರು ಲೋಕದ
ಗಂಡರೊಬ್ಬಳನಾಳಲಾರಿರಿ
ಗಂಡರೋ ನೀವ್ ಭಂಡರೊ ಹೇಳೆಂದಳಿಂದುಮುಖಿ

42. ಒಲೆಹತ್ತಿ ಉರಿದಡೆ ನಿಲಬಹುದಲ್ಲದೆ
ಧರೆಹತ್ತಿ ಉರಿದಡೆ ನಿಲಲು ಬಾರದು
ಏರಿ ನೀರುಂಬಡೆ , ಬೇಲಿ ಕೆಯ್ಯೆಮೇವಡೆ
ನಾರಿ ತನ್ನ ಮನೆಯಲ್ಲಿ ಕಳುವಡೆ
ತಾಯ ಮೊಲೆವಾಲು ನಂಜಾಗಿ ಕೊಲುವಡೆ
ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ !

ಭಾಷಾಭ್ಯಾಸ

VI.ಅ) ಈ ಕೆಳಗಿನವುಗಳಿಗೆ ಎಲ್ಲಾ ಸೂಚನೆ ಅನುಗುಣವಾಗಿ ಉತ್ತರಿಸಿ . (6 x 2 = 12 )

43. ಈ ಪದಗಳಿಗೆ ಅರ್ಥವನು ಬರೆಯಿರಿ

1) ತಮ 2) ಪಂಕ

44. ಈ ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ

1) ಕಳೆ 2) ದೊರೆ

45. ಈ ಪದಗಳಿಗೆ ತದ್ಭವ ರೂಪ ಬರೆಯಿರಿ .

1) ವೀರ 2) ಯೋಗಿ

46. ಈ ನುಡಿಗಟ್ಟುಗಳನ್ನು ವಾಕ್ಯದಲ್ಲಿ ಬಳಸಿ

1) ಕೈಯೊಡ್ಡು 2) ಎರಡು ಬಗೆ

47. ಈ ಪದಗಳ ಗುಣವಾಚಕಗಳನ್ನು ಗುರುತಿಸಿ

1) ಹೆಮ್ಮರ 2) ಶುದ್ಧ ನೀರು

48. ಈ ಕೆಳಗಿನ ಕ್ರಿಯಾಪದಗಳ ಧಾತು ಗುರುತಿಸಿ .

1) ಹಾಡುವಳು 2) ಬಂದನು

49. ಇವುಗಳ ಕಾಲಸೂಚಕಗಳನ್ನು ಬರೆಯಿರಿ

1) ಬರುವರು 2)ಬಂದನು

<u>ಆ) ಎಲ್ಲಾ ಕುರಿತು ಪ್ರಬಂಧವನ್ನು ಬರೆಯಿರಿ</u> (1 x 5 = 5 )

50. ಕನ್ನಡ ಭಾಷೆಯನ್ನು ಅಭಿವೃದ್ಧಿಗೊಳಿಸುವ ಮಾರ್ಗಗಳು

51. ಕ್ರೀಡೆಗಳ ಮಹತ್ವ .

<u>ಇ) ಎಲ್ಲಾ ಕುರಿತು ಪತ್ರ ಬರೆಯಿರಿ</u> (1 x 4 = 4)

52. ನಿಮ್ಮ ಊರಿನಲ್ಲಿ ನಡೆಯುವ ಜಾತ್ರೆಗೆ ಆಹ್ವಾನಿಸಿ ನಿಮ್ಮ ಮಿತ್ರರಿಗೆ ಪತ್ರವನ್ನು ಬರೆಯಿರಿ.

53. ಬ್ಯಾಂಕಿನಲ್ಲಿ ಉಳಿತಾಯ ಖಾತೆ ತೆರೆಯಲು ಅವಕಾಶ ಕೋರಿ ಬ್ಯಾಂಕಿನ ವ್ಯವಸ್ಥಾಪರಿಗೆ ಒಂದು ಪತ್ರವನ್ನು ಬರೆಯಿರಿ.

<u>ಈ) ಕೆಳಗಿನ ಎಲ್ಲಾ ಗಾದೆಯನ್ನು ವಿಸ್ತರಿಸಿ ಬರೆಯಿರಿ.</u> (1 x 4 = 4 )

54. ಆಕಳು ಕಪ್ಪಾದರೆ ಹಾಲು ಕಪ್ಪೇ.

55. ಸಜ್ಜನರ ದುಃಖ , ದುರ್ಜನರ ಸಿರಿ ಶಾಶ್ವತವಲ್ಲ

******